# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1288 |
| ಮಾನ್ಯ ವಿಧಾನ ಸಭಾ ಸದಸ್ಯರ ಹೆಸರು | : | ಶ್ರೀ ಡಾ:ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ: | : | 13/03/2026 |
| ಉತ್ತರಿಸುವ ಸಚಿವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಅಧೀನದಲ್ಲಿ ನಡೆಯುತ್ತಿರುವ ಸರ್ಕಾರಿ ಅಂಧ, ಶ್ರವಣ ನ್ಯೂನ್ಯತೆ ಮತ್ತು ಬುದ್ಧಿಮಾಂದ್ಯ ಮಕ್ಕಳ ಅನುಪಾಲನ ಗೃಹ ವಿಶೇಷ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಾಥಮಿಕ ಶಾಲಾ ಸಹಾಯಕ ಶಿಕ್ಷಕರು, ದೈಹಿಕ ಶಿಕ್ಷಣ ಶಿಕ್ಷಕರು, ಸಂಗೀತ ಶಿಕ್ಷಕರು ದರ್ಜೆ-3 ಮತ್ತು ಪ್ರೌಢ ಶಾಲೆಯ ಸಂಗೀತ ಶಿಕ್ಷಕರು ದರ್ಜೆ-2ರ ಹುದ್ದೆಯ ಮೂಲವೇತನ ಶ್ರೇಣಿ ವ್ಯತ್ಯಾಸವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು; | ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಅಧೀನದಲ್ಲಿ ನಡೆಯುತ್ತಿರುವ ಸರ್ಕಾರಿ ಅಂಧ ಮತ್ತು ಶ್ರವಣನ್ಯೂನತೆವುಳ್ಳ ಮಕ್ಕಳ ವಿಶೇಷ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಾಥಮಿಕ ಶಾಲಾ ಸಹಾಯಕ ಶಿಕ್ಷಕರು, ದೈಹಿಕ ಶಿಕ್ಷಣ ಪ್ರೌಢ ಶಾಲೆಯ ಸಂಗೀತ ಶಿಕ್ಷಕರು ದರ್ಜೆ-3 ಮತ್ತು ಪ್ರೌಢ ಶಾಲೆಯ ಸಂಗೀತ ವೇತನ ಶ್ರೇಣಿ ವ್ಯತ್ಯಾಸವಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಈ ಸಂಬಂಧ ಸದರಿ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳ ವೇತನ ಶ್ರೇಣಿಯಲ್ಲಿನ ವೇತನ ತಾರತಮ್ಯವನ್ನು ಸರಿಪಡಿಸಿ ಶಿಕ್ಷಣ ಇಲಾಖೆಯಲ್ಲಿರುವಂತೆ ನಿಯಮಾನುಸಾರ ವೇತನ ಶ್ರೇಣಿಯನ್ನು ತಿದ್ದುಪಡಿ ಮಾಡುವ ಸಂಬಂಧ ಸ್ವೀಕೃತವಾದ ಪ್ರಸ್ತಾವನೆಯಲ್ಲಿ ಆರ್ಥಿಕ ಪರಿಣಾಮ ಉಂಟಾಗುವುದರಿಂದ ಸದರಿ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯ ಸಹಮತಿಯನ್ನು ಕೋರಿ ಕಡತವನ್ನು ಸಲ್ಲಿಸಲಾಗಿರುತ್ತದೆ. |
| ಆ) | 7ನೇ ವೇತನ ಆಯೋಗದ ಅನ್ವಯ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸರ್ಕಾರಿ ಮತ್ತು 1982ರ ಅನುದಾನಿತ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಎಲ್ಲಾ ವೃಂದದ ಶಿಕ್ಷಕರಿಗೆ ನಿಗದಿಗೊಳಿಸಿದ ಮೂಲವೇತನ ಶ್ರೇಣಿ ಯಾವುದು; (ಮಾಹಿತಿ ನೀಡುವುದು) | 7ನೇ ವೇತನ ಆಯೋಗದ ಅನ್ವಯ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯವತಿಯಿಂದ ನಡೆಯುತ್ತಿರುವ ಸರ್ಕಾರಿ ವಿಶೇಷ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಎಲ್ಲಾ ವೃಂದದ ಶಿಕ್ಷಕರ ಮೂಲ ವೇತನ ಶ್ರೇಣಿಯ ಮಾಹಿತಿಯನ್ನು **ಅನುಬಂಧ-1 ರಲ್ಲಿ** ಒದಗಿಸಲಾಗಿದೆ.<br><br>1982ರ ರಾಜ್ಯ ಅನುದಾನ ಸಂಹಿತೆಯಡಿ ನಡೆಯುತ್ತಿರುವ ವಿಶೇಷ ಶಾಲೆಗಳಲ್ಲಿನ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಎಲ್ಲಾ ವೃಂದದ ಶಿಕ್ಷಕರ ಮೂಲವೇತನ ಶ್ರೇಣಿಯ ಮಾಹಿತಿಯನ್ನು **ಅನುಬಂಧ-2ರಲ್ಲಿ** ಒದಗಿಸಲಾಗಿದೆ. |
| ಇ) | ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಅಧೀನದಲ್ಲಿ ನಡೆಯುತ್ತಿರುವ ಸರ್ಕಾರಿ ಕಿವುಡ ಮತ್ತು ಮೂಕ ಮಕ್ಕಳ ವಸತಿಯುತ ವಿಶೇಷ ಶಾಲೆಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರ ಮಂಜೂರಾತಿ ಹುದ್ದೆ ಇಲ್ಲದಿರುವುದಕ್ಕೆ ಕಾರಣವೇನು; | ಸರ್ಕಾರದ ಆದೇಶ ಸಂಖ್ಯೆ:ಎಸ್.ಡ.ಬ್ಲ್ಯೂ.ಎಲ್/174/ಪಿಹೆಚ್ ಪಿ/86 ದಿನಾಂಕ:12.7.1988 ರಂತೆ ಅಂಗವಿಕಲರ ಪುನಸ್ಚೇತನ ಇಲಾಖೆಯು ಅಸ್ತಿತ್ವಕ್ಕೆ ಬಂದಿದ್ದು, ಅದರಲ್ಲಿ 04 ಕಿವುಡ ಮೂಕ ಮಕ್ಕಳ ಶಾಲೆಗಳಲ್ಲಿ ಇತರೆ ಹುದ್ದೆಗಳೊಂದಿಗೆ 03 ಶಾಲೆಗಳಲ್ಲಿ ತಲಾ 01 ವ್ಯಾಯಾಮ ಶಿಕ್ಷಕರ ಹುದ್ದೆಗಳು ಮಾತ್ರ ಮಂಜೂರಾಗಿದ್ದು, ನಂತರ ಸರ್ಕಾರದ ಆದೇಶ ಸಂಖ್ಯೆ:ಮಮಇ/187/ಎಸ್.ಜಿ.ಡಿ/2005 ದಿನಾಂಕ:03.05.2005ರಲ್ಲಿ ಸದರಿ 03 ವ್ಯಾಯಾಮ ಶಿಕ್ಷಕರುಗಳ ಹುದ್ದೆಗಳನ್ನು ರದ್ದುಗೊಳಿಸಲಾಗಿರುತ್ತದೆ.<br><br>ನಂತರ ಇಲಾಖೆಯ ವಶಕ್ಕೆ ಪಡೆಯಲಾದ ಬೆಂಗಳೂರಿನ ಸರ್ಕಾರಿ ಕಿವುಡು ಮತ್ತು ಮೂಕ ಮಕ್ಕಳ ಶಾಲೆಯಲ್ಲಿ 01 ದೈಹಿಕ ಶಿಕ್ಷಣದ ಶಿಕ್ಷಕರ ಹುದ್ದೆಯು ಮಂಜೂರಾಗಿರುತ್ತದೆ. |
| ಈ) | 1982ರ ಅನುದಾನಿತ ಸಂಹಿತೆಯಡಿ ನಡೆಯುತ್ತಿರುವ ಅನುದಾನಿತ ಅಂಧ ಹಾಗೂ ಕಿವುಡ ಮತ್ತು ಮೂಕ ಮಕ್ಕಳ ಪ್ರಾಥಮಿಕ ವಿಶೇಷ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ವೃಂದದ ಶಿಕ್ಷಕರ ಪ್ರಸ್ತುತ ಮೂಲ ವೇತನ ಶ್ರೇಣಿ ಏನು; (ಸಂಪೂರ್ಣ ಮಾಹಿತಿ ನೀಡುವುದು); | 1982ರ ರಾಜ್ಯ ಅನುದಾನ ಸಂಹಿತೆಯಡಿ ನಡೆಯುತ್ತಿರುವ ಅಂಧ ಹಾಗೂ ಕಿವುಡು ಮತ್ತು ಮೂಕ ಮಕ್ಕಳ ಪ್ರಾಥಮಿಕ ವಿಶೇಷ ಶಾಲೆಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಎಲ್ಲಾ ವೃಂದದ ಶಿಕ್ಷಕರ ಪ್ರಸ್ತುತ ಮೂಲ ವೇತನ ಶ್ರೇಣಿಯ ಮಾಹಿತಿಯನ್ನು **ಅನುಬಂಧ 03ರಲ್ಲಿ** ಒದಗಿಸಲಾಗಿದೆ. |

| | | |
|---|---|---|
| ಉ) | ಇಲಾಖೆಯಲ್ಲಿನ ಕೆಲವು ವೃಂದದ ನೌಕರರಿಗೆ ಮುಂಬಡ್ತಿ ನೀಡುವಂತೆ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಬೆಂಗಳೂರು ರವರು 05-07-2024ರಲ್ಲಿ ಮುಂಬಡ್ತಿ ನೀಡಬಹುದೆಂದು ಸರ್ಕಾರದ ಆದೇಶವಾಗಿದ್ದರೂ ವಿಳಂಬ ಮಾಡುತ್ತಿರಲು ಕಾರಣಗಳೇನು; (ಮಾಹಿತಿ ನೀಡುವುದು) | ಇಲಾಖೆಯಲ್ಲಿ ಚಾಲ್ತಿ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಗ್ರೂಪ್-ಬಿ, ಗ್ರೂಪ್-ಸಿ, ಗ್ರೂಪ್-ಡಿ ಹುದ್ದೆಗಳಲ್ಲಿನ ಅರ್ಹ ಸಿಬ್ಬಂದಿಗಳಲ್ಲಿ ಮುಂಬಡ್ತಿ ನೀಡುವ ಸಂಬಂಧ ಅನುಮತಿ ನೀಡಲಾಗಿದ್ದು, ಇಲಾಖೆಯಲ್ಲಿ ಮಂಜೂರಾದ ಒಟ್ಟು ಹುದ್ದೆಯಲ್ಲಿ ಅನುಚ್ಛೇದ 371 ಜೆ ರಡಿ ಹೈದ್ರಾಬಾದ್ ಕರ್ನಾಟಕ ಸ್ಥಳೀಯ ವ್ಯಕ್ತಿಗಳಿಗೆ ಅನ್ವಯಿಸುವಂತೆ ರಾಜ್ಯ ಮಟ್ಟದ ಹಾಗೂ ರಾಜ್ಯ ವ್ಯಾಪ್ತಿ ಸ್ಥಳೀಯ ವೃಂದಗಳನ್ನು ಗುರುತಿಸಿ ಅಂತಿಮ ಅಧಿಸೂಚನೆಯ ಆದೇಶವನ್ನು ಹೊರಡಿಸಿದ್ದು, ಸದರಿ ಅಂತಿಮ ಅಧಿಸೂಚನೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಗೊಂಡ ನಂತರ ಇಲಾಖೆಯಲ್ಲಿನ ಅರ್ಹ ಸಿಬ್ಬಂದಿಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನಿಯಮಾನುಸಾರ ಮುಂಬಡ್ತಿ ನೀಡಲು ಕ್ರಮವಹಿಸಲಾಗುವುದು. |
| ಊ) | ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು 2004ರಿಂದ ಇಲ್ಲಿಯವರೆಗೆ ಸಮಗ್ರವಾಗಿ ಪರಿಷ್ಕರಣೆಗೊಳ್ಳದಿರುವುದಕ್ಕೆ ಕಾರಣವೇನು? (ಮಾಹಿತಿ ನೀಡುವುದು) | ಇಲಾಖೆಯ ಪರಿಷ್ಕರಿಸಿದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಆರ್ಥಿಕ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವಾ ನಿಯಮಗಳು) ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಗಳೊಂದಿಗೆ ಸಮಾಲೋಚಿಸಿ ಸಚಿವ ಸಂಪುಟದ ಅನುಮೋದನೆ ಪಡೆದು, ಅಂತಿಮವಾಗಿ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗುವುದು. |

**ಸಂಖ್ಯೆ:ಮಮಇ 68 ಪಿಹೆಚ್‌ಪಿ 2026**

(ಲಕ್ಷ್ಮೀ ಆರ್. ಹೆಬ್ಬಾಳಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು.

## ಅನುಬಂಧ 01

**ಸರ್ಕಾರಿ ವಿಶೇಷ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದೃಷ್ಟಿದೋಷವುಳ್ಳ ಹಾಗೂ ಶ್ರವಣದೋಷವುಳ್ಳ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಎಲ್ಲಾ ವೃಂದದ ಶಿಕ್ಷಕರ ಮೂಲವೇತನ ಶ್ರೇಣಿಯ ಮಾಹಿತಿ**

| ಕ್ರ. ಸಂ. | ಹುದ್ದೆಯ ಪದನಾಮ | ವೇತನ ಶ್ರೇಣಿ |
|---|---|---|
| 1 | ಪದವೀಧರ ಶಿಕ್ಷಕರು | 54175-99400 |
| 2 | ಕಂಪ್ಯೂಟರ್ ಶಿಕ್ಷಕರು | 54175-99400 |
| 3 | ಸಂಗೀತ ಶಿಕ್ಷಕರು ದರ್ಜೆ-1 | 49050-92500 |
| 4 | ಮ್ಯಾಟ್ ಮೇಕಿಂಗ್ ಬೋಧಕರು | 49050-92500 |
| 5 | ಪದವಿ ಪೂರ್ವ ಸಹಾಯಕ ಶಿಕ್ಷಕರು | 37500-76100 |
| 6 | ದೈಹಿಕ ಶಿಕ್ಷಕರು | 37500-76100 |
| 7 | ಸಂಗೀತ ಶಿಕ್ಷಕರು ದರ್ಜೆ-2 | 37500-76100 |
| 8 | ಚಲನ ವಲನ ಬೋಧಕರು ದರ್ಜೆ-2 | 37500-76100 |
| 9 | ಕ್ರಾಫ್ಟ್ ಶಿಕ್ಷಕರು / ಬೋಧಕರು | 37500-76100 |
| 10 | ಸಂಗೀತ ಶಿಕ್ಷಕರು ದರ್ಜೆ 3 | 34100-67600 |

## ಅನುಬಂಧ 02

**1982ರ ರಾಜ್ಯ ಅನುದಾನ ಸಂಹಿತೆಯಡಿ ನಡೆಯುತ್ತಿರುವ ವಿಶೇಷ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಎಲ್ಲಾ ವೃಂದದ ಶಿಕ್ಷಕರ ಮೂಲವೇತನ ಶ್ರೇಣಿಯ ಮಾಹಿತಿ**

| ಕ್ರ. ಸಂ. | ಹುದ್ದೆಯ ಪದನಾಮ | ವೇತನ ಶ್ರೇಣಿ |
|---|---|---|
| 1 | ಮುಖ್ಯೋಪಾಧ್ಯಾಯರು (ಪ್ರೌಢ) | 69250-134200 |
| 2 | ಮುಖ್ಯೋಪಾಧ್ಯಾಯರು (ಬುದ್ಧಿಮಾಂದ್ಯ ಶಾಲೆ) | 54175-99400 |
| 3 | ಸಹಾಯಕ ಶಿಕ್ಷಕರು (ಪ್ರೌಢ) | 54175-99400 |
| 4 | ಚಲನವಲನ ಬೋಧಕರು (ಪ್ರೌಢ) | 54175-99400 |
| 5 | ಚಲನವಲನ ಬೋಧಕರು (ಪ್ರಾಥಮಿಕ) | 37500-76100 |
| 6 | ಸಹಾಯಕ ಶಿಕ್ಷಕರು (ಪ್ರಾಥಮಿಕ) | 37500-76100 |
| 7 | ಕಿರಿಯ ವೃತ್ತಿ ಶಿಕ್ಷಕರು (ಪ್ರಾಥಮಿಕ) | 37500-76100 |
| 8 | ಕರಕುಶಲ ಶಿಕ್ಷಕರು (ಪ್ರಾಥಮಿಕ) | 37500-76100 |
| 9 | ಕರಕುಶಲ ಶಿಕ್ಷಕರು (ಪ್ರೌಢ) | 54175-99400 |
| 10 | ದೈಹಿಕ ಶಿಕ್ಷಕರು (ಪ್ರೌಢ) | 54175-99400 |
| 11 | ದೈಹಿಕ ಶಿಕ್ಷಕರು (ಪ್ರಾಥಮಿಕ) | 37500-76100 |
| 12 | ಸಂಗೀತ ಶಿಕ್ಷಕರು (ಪ್ರಾಥಮಿಕ) | 37500-76100 |
| 13 | ಚಿತ್ರಕಲಾ ಶಿಕ್ಷಕರು | 37500-76100 |
| 14 | ಹಿಂದಿ ಶಿಕ್ಷಕರು | 37500-76100 |

<u>ಅನುಬಂಧ 03</u>

**1982ರ ರಾಜ್ಯ ಅನುದಾನ ಸಂಹಿತೆಯಡಿ ನಡೆಯುತ್ತಿರುವ ವಿಶೇಷ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದೃಷ್ಟಿದೋಷವುಳ್ಳ ಹಾಗೂ ಶ್ರವಣದೋಷವುಳ್ಳ ಪ್ರಾಥಮಿಕ ಶಾಲೆಗಳ ಎಲ್ಲಾ ವೃಂದದ ಶಿಕ್ಷಕರ ಮೂಲವೇತನ ಶ್ರೇಣಿಯ ಮಾಹಿತಿ**

| ಕ್ರ. ಸಂ. | ಹುದ್ದೆಯ ಪದನಾಮ | ವೇತನ ಶ್ರೇಣಿ |
|---|---|---|
| 1 | ಚಲನವಲನ ಬೋಧಕರು (ಪ್ರಾಥಮಿಕ) | 37500-76100 |
| 2 | ಸಹಾಯಕ ಶಿಕ್ಷಕರು (ಪ್ರಾಥಮಿಕ) | 37500-76100 |
| 3 | ಕಿರಿಯ ವೃತ್ತಿ ಶಿಕ್ಷಕರು (ಪ್ರಾಥಮಿಕ) | 37500-76100 |
| 4 | ಕರಕುಶಲ ಶಿಕ್ಷಕರು (ಪ್ರಾಥಮಿಕ) | 37500-76100 |
| 5 | ದೈಹಿಕ ಶಿಕ್ಷಕರು (ಪ್ರಾಥಮಿಕ) | 37500-76100 |
| 6 | ಸಂಗೀತ ಶಿಕ್ಷಕರು (ಪ್ರಾಥಮಿಕ) | 37500-76100 |
| 7 | ಚಿತ್ರಕಲಾ ಶಿಕ್ಷಕರು | 37500-76100 |
| 8 | ಹಿಂದಿ ಶಿಕ್ಷಕರು | 37500-76100 |
| 9 | ಚಲನವಲನ ಬೋಧಕರು (ಪ್ರಾಥಮಿಕ) | 37500-76100 |